# ಭಾರತೀಯ ರುಮಟಾಲಜಿ ತಜ್ಞ ವೈದ್ಯರ ಸಂಘ
## ಕರ್ನಾಟಕ ರಾಜ್ಯ ಶಾಖೆ
# Indian Rheumatology Association
## Karnataka Chapter

# 65(414), 20th Main, 1st Block, West of Chord Road, Rajajinagar, Bengaluru - 560 010. Ph : 08042516699, +91 9886504455



Patrons
**Dr KM Mahendranath**
**Dr BG Dharmanand**

President
**Dr Vineeta Shobha**

Vice - President
**Dr Ramesh Jois**

Secretary
**Dr Nagaraj S**
**98865 04455**

Treasurer
**Dr Shiva Prasad BN**

Joint Secretary
**Dr Pramod Chebbi**

Executive Committee
**Dr Subramanian R**
**Dr Uma Karjigi**
**Dr Vijay KR Rao**
**Dr Chethana D**
**Dr Utkarsha Patil**
**Dr Ashwini Kamath**

Website
**Dr Harshini AS**

Advisors
**Dr Chandrashekara S**
**Dr Sharath Kumar**
**Dr Vikramraj Jain**


15/10/22

**ಪತ್ರಿಕಾ ಪ್ರಕಟಣೆ**

ಸಂಧಿವಾತ ಸಮಸ್ಯೆಗಳು ಬಹುಮುಖ್ಯ ರೋಗಪ್ರಕಾರವಾದರೂ ಸಹ ಅವುಗಳಿಗೆ ದೊರಕಬೇಕಾದ ಸೂಕ್ತಪ್ರಾಮುಖ್ಯತೆ ದೊರೆಯದಂತಾಗಿದೆ. ತರುಣ ವಯಸ್ಸಿನವರಲ್ಲಿ ಸಂಧಿವಾತ ಕಾಣಿಸಿಕೊಂಡರೆ, ಇದು ಇಳಿವಯಸ್ಸಿನವರಲ್ಲಿ ಬರುವ ಕಾಯಿಲೆ, ಯುವ ಮತ್ತು ಮಧ್ಯವಯಸ್ಸಿನವರಿಗಲ್ಲ ಎಂದು ಕಡೆಗಣನೆ. ಇನ್ನು ಇಳಿವಯಸ್ಸಿನವರಲ್ಲಿ ವಾಯುರೋಗ ಬಂದರೆ, ಇದು ವೃದ್ಧಾಪ್ಯದಲ್ಲಿ ಬಂದೇ ಬರುವ ವಯೋಸಹಜ ಸಮಸ್ಯೆ ಎಂದು ಅಸಡ್ಡೆ. ಹೀಗೆ ಸಂಧಿವಾತ ರೋಗದಿಂದ ಬಳಲುತ್ತಿರುವ ರೋಗಿಗಳಿಗೆ ರೋಗ ಪತ್ತೆಯಾಗುವುದು ತಡವಾಗಿ, ಸೂಕ್ತ ಚಿಕಿತ್ಸೆ ಮರೀಚಿಕೆಯಾಗಿ, ತಮ್ಮಸಂಧಿವಾತ ಸಮಸ್ಯೆ ತಮ್ಮ ಭ್ರಮೆಯೇನೋ ಎಂಬಂತಾಗಿ ಬಿಡುತ್ತದೆ. ತಮ್ಮ ಕೀಲು ನೋವುಗಳಿಗೆ ಸರಿಯಾಗಿ ಸ್ಪಂದನೆ ದೊರೆಯದೆ, ಮನೆಯವರಿಂದ, ಸಮಾಜದಿಂದ ವಿಮುಖರಾಗಿ ಖಿನ್ನತೆಗೊಳಗಾಗಿ, ಮೌನವಾಗಿ ಕೀಲುವಾಯುವಿನ ಹಿಂಸೆ ಅನುಭವಿಸುತ್ತಿರುವವರೆಷ್ಟೋ ಮಂದಿ. ಭಾರತದಲ್ಲಿಸುಮಾರು 6 ಕೋಟಿ ಜನರು ಸಂಧಿವಾತ ರೋಗಗಳಿಂದ ಬಳಲುತ್ತಿರಬಹುದೆಂದು ಅಂದಾಜಿಸಲಾಗಿದೆ.

**ಪ್ರತಿ ವರ್ಷ ಅಕ್ಟೋಬರ್ 12 'ವಿಶ್ವ ಆರ್ಥ್ರೈಟಿಸ್ ದಿನ '.**

ಭಾರತೀಯ ರುಮಟಾಲಜಿ ತಜ್ಞ ವೈದ್ಯರ ಸಂಘದ ರಾಷ್ಟ್ರೀಯ ಅಧ್ಯಕ್ಷ, ನಮ್ಮ ರಾಜ್ಯದವರೇ ಆದ ಹಿರಿಯ ಸಂಧಿವಾತ ತಜ್ಞ, **ಡಾ.ಧರ್ಮಾನಂದ** ಅವರ ನೇತೃತ್ವದಲ್ಲಿಈ ವರ್ಷ ಅನೇಕ ಕಾರ್ಯಕ್ರಮಗಳನ್ನು ದೇಶಾದ್ಯಂತ ಹಮ್ಮಿಕೊಳ್ಳಲಾಗಿದೆ. ಹಿಂದೆಂದಿಗಿಂತಲೂ ಹೆಚ್ಚು ಅರ್ಥಪೂರ್ಣ ಚಟುವಟಿಕೆಗಳು ನಡೆಯುತ್ತಿದ್ದು, ಸಂಧಿವಾತ ಮತ್ತು ವಾಯುರೋಗಗಳ ಬಗೆಗಿನ ಜನಸಾಮಾನ್ಯರ ತಿಳುವಳಿಕೆ ಹೆಚ್ಚಿಸುವಲ್ಲಿ ಯಶಸ್ವಿಯಾಗಿವೆ. ವೈದ್ಯ ಸಮೂಹವಷ್ಟೇ ಅಲ್ಲದೆ ರೋಗಿಗಳು ಮತ್ತು ಅವರ ಕುಟುಂಬದವರು ಹಾಗೂ ಕೆಲವು ಸಂಘ ಸಂಸ್ಥೆಗಳು ಈ ದಿಸೆಯಲ್ಲಿ ಕೈ ಜೋಡಿಸಿವೆ. ಸಾಮಾಜಿಕ ಮಾಧ್ಯಮಗಳ ಸಮರ್ಥ ಬಳಕೆ ಮಾಡಿಕೊಳ್ಳಲಾಗುತ್ತಿದೆ. ಮುದ್ರಣ ಮಾಧ್ಯಮ ಹಾಗೂ ವಿದ್ಯುನ್ಮಾನ ಮಾಧ್ಯಮಗಳೂ ಸಹಕಾರ ನೀಡುತ್ತಿವೆ.

***ವಾಯುರೋಗ ಅಥವಾ ಸಂಧಿವಾತ(ಆರ್ಥ್ರೈಟಿಸ್) ಕಾಯಿಲೆಗಳಿಗೆ ಏಕಿಷ್ಟು ಪ್ರಾಮುಖ್ಯತೆ ನೀಡಬೇಕು?***

ನೆನಪಿರಲಿ, ಸೂಕ್ತ ಸಮಯದಲ್ಲಿ ಸೂಕ್ತ ಚಿಕಿತ್ಸೆಯಾಗದಿದ್ದರೆ ಸಂಧಿವಾತವು ಅಂಗವಿಕಲತೆ ಉಂಟು ಮಾಡುವುದಲ್ಲದೆ, ರೋಗ ಉಲ್ಬಣಿಸಿ ವ್ಯಕ್ತಿ ಸಾಯಲೂಬಹುದು! ಹೌದು, ಸಂಧಿವಾತ ಕಾಯಿಲೆಗಳು ಜೀವಹಾನಿ ಮಾಡಬಲ್ಲವೆಂದು ಇತ್ತೀಚಿನ ದಶಕಗಳ ಸಂಶೋಧನೆಗಳಿಂದ ದೃಢವಾಗಿದೆ. ಆದರೆ ಸೂಕ್ತ ಚಿಕಿತ್ಸೆಯಿಂದ ಬಹುತೇಕ ಸಂಧಿವಾತ ರೋಗಗಳನ್ನು ಸಂಪೂರ್ಣವಾಗಿ ನಿಯಂತ್ರಿಸಬಹುದು. ಅಂದರೆ, ಈ ಕಾಯಿಲೆಗಳು ಮಾರಕವಾಗಿ ಪರಿಣಮಿಸುವುದು ಸೂಕ್ತ ಸಮಯದಲ್ಲಿ ರೋಗ

ಭಾರತೀಯ ರುಮಟಾಲಜಿ ತಜ್ಞ ವೈದ್ಯರ ಸಂಘ
ಕರ್ನಾಟಕ ರಾಜ್ಯ ಶಾಖೆ
Indian Rheumatology Association
Karnataka Chapter
# 65(414), 20th Main, 1st Block, West of Chord Road, Rajajinagar, Bengaluru - 560 010. Ph : 08042516699, +91 9886504455

Patrons
Dr KM Mahendranath
Dr BG Dharmanand

President
Dr Vineeta Shobha

Vice - President
Dr Ramesh Jois

Secretary
Dr Nagaraj S
98865 04455

Treasurer
Dr Shiva Prasad BN

Joint Secretary
Dr Pramod Chebbi

Executive Committee
Dr Subramanian R
Dr Uma Karjigi
Dr Vijay KR Rao
Dr Chethana D
Dr Utkarsha Patil
Dr Ashwini Kamath

Website
Dr Harshini AS

Advisors
Dr Chandrashekara S
Dr Sharath Kumar
Dr Vikramraj Jain



ಪತ್ತೆಯಾಗದಿದ್ದಾಗ ಮತ್ತು ರುಮಟಾಲಜಿ ತಜ್ಞವೈದ್ಯರ ಸಮಾಲೋಚನೆ ಆಗದೆ ಸರಿಯಾದ ಔಷಧ ಸೇವಿಸದೇ ಹೋದಾಗ. ರೋಗಿಗಳನ್ನು ಆರಂಭದಲ್ಲೇ ಪತ್ತೆಹಚ್ಚಿ, ರುಮಟಾಲಜಿ ತಜ್ಞ ವೈದ್ಯರ ಸಮಾಲೋಚನೆಗೆ ಕಳುಹಿಸಿ, ಅವರ ಸಮಸ್ಯೆಗಳನ್ನು ಕಡೆಗಣಿಸದೆ, ಔಷಧಿಗಳಿಗೆ ಭಯಪಡದೆ, ಕಾಯಿಲೆ ಮತ್ತು ಚಿಕಿತ್ಸೆಯ ಗಂಭೀರತೆ ಅರಿತುಕೊಂಡು, ಯಾವುದೇ ಅನುಮಾನಗಳು ಬಂದರೂ ಪರಿಹರಿಸಿ, ನಂಬಿಕೆ ಮತ್ತು ವಿಶ್ವಾಸದಿಂದ ರೋಗಿಗಳು ಚಿಕಿತ್ಸೆ ಪಡೆದುಕೊಳ್ಳುವಂತೆ ಮಾಡುವುದು ಪ್ರತಿಯೊಬ್ಬರ ಜವಾಬ್ದಾರಿ – ರೋಗಿಯ ಮನೆಯವರು, ಬಂಧುಗಳು, ಸಹೋದ್ಯೋಗಿಗಳು, ಪರಿಚಿತರು, ಕುಟುಂಬ ವೈದ್ಯರು, ದಾದಿಗಳು, ಔಷಧಿ ಅಂಗಡಿಯವರು, ಆರೋಗ್ಯ ಕಾರ್ಯಕರ್ತರು, ಸಂಘ-ಸಂಸ್ಥೆಗಳು – ಹೀಗೆ ಇಡೀ ಸಮಾಜದ ಗುರುತರ ಜವಾಬ್ದಾರಿ ಇದಾಗಿದೆ.

ಏಕೆಂದರೆ, ಅಂಗವಿಕಲತೆ ತಪ್ಪಿಸುವುದು ಮರು ಜೀವನ ನೀಡಿದಂತೆ. ಸಾವಿನ ಅಂಚಿನಿಂದ ಕಾಪಾಡುವುದು ಮರುಹುಟ್ಟು ನೀಡಿದಂತೆ. ಇದರಲ್ಲಿ ರುಮಟಾಲಜಿ ತಜ್ಞ ವೈದ್ಯರ ಜೊತೆ ಎಲ್ಲರೂ ಒಂದಾಗಬೇಕು.

ವಿಶ್ವ ಆರ್ಥ್ರೈಟಿಸ್ ದಿನ ಮತ್ತು ವಾಯುರೋಗ ಜನಜಾಗೃತಿ ಕಾರ್ಯಕ್ರಮಗಳ ಉದ್ದೇಶವೂ ಇದೇ ಆಗಿದೆ.

***<u>ರುಮ್ಯಾಟಿಕ್ ಕಾಯಿಲೆ ಪ್ರಮುಖ ಪ್ರಕಾರಗಳು ಮತ್ತು ಮಾಹಿತಿ ಕೊರತೆ</u>***

ರುಮಟಾಯ್ಡ್ ಆರ್ಥ್ರೈಟಿಸ್, ಸೋರಿಯಾಟಿಕ್ ಆರ್ಥ್ರೈಟಿಸ್, ಆಂಕಿಲೋಸಿಂಗ್ ಸ್ಪಾಂಡಿಲೈಟಿಸ್, ಗೌಟ್, ವಾಸ್ಕ್ಯುಲೈಟಿಸ್, ಲೂಪಸ್, ಮುಂತಾದವು ಪ್ರಮುಖ ವಾಯುರೋಗಗಳು. ಕೈ-ಕಾಲುಗಳ ಗಂಟುಗಳಲ್ಲಿ, ಮಂಡಿ, ಭುಜ, ಪಾದ, ಮೊಣಕೈ, ಮಣಿಕಟ್ಟು - ಮೊದಲಾದ ಕೀಲುಗಳಲ್ಲಿ ನೋವು, ಬಾವು (ಊತ), ಬಿಗಿತ ಉಂಟಾದಾಗ ಕೀಲುವಾಯು / ಸಂಧಿವಾತ / ವಾಯು ರೋಗ ಇರಬಹುದೆಂದು ಪತ್ತೆ ಮಾಡುವುದು ಸಹಜ. ಆದರೆ ಚರ್ಮ ದದ್ದು (ಸ್ಕಿನ್ ರಾಷ್) , ಸೋರಿಯಾಸಿಸ್, ಕಣ್ಣಲ್ಲಿ ಕೆಂಪಾಗುವಿಕೆ, ದೃಷ್ಟಿ ಏರುಪೇರು, ಹೃದಯ ಸಮಸ್ಯೆ, ಶ್ವಾಸಕೋಶ ತೊಂದರೆ, ದೀರ್ಘ ಸಮಯದ ಕೆಮ್ಮು (ವಿಶೇಷವಾಗಿ ಒಣ ಕೆಮ್ಮು), ಉಬ್ಬಸ ಮತ್ತು ಏದುಸಿರು (ಐ.ಎಲ್.ಡಿ. ಕಾಯಿಲೆ), ಮೂತ್ರಪಿಂಡ ರೋಗ, ಮೆದುಳು ಮತ್ತು ನರರೋಗ, ಕಾಲಿನಲ್ಲಿ ವಾಸಿಯಾಗದ ಗಾಯ - ಇವುಗಳೂ ಕೂಡ ರುಮಟಾಲಜಿ ಕಾಯಿಲೆಗಳು (ವಾಯುರೋಗ ಪ್ರಕಾರಗಳು) ಎಂದಾಗ ಬಹುತೇಕ ಜನ ಸಾಮಾನ್ಯರಿಗೆ ಆಶ್ಚರ್ಯವಾಗುತ್ತದೆ.

ಸರಿಯಾದ ಮಾಹಿತಿಯ ಕೊರತೆಯೇ ಇದಕ್ಕೆಲ್ಲ ಮೂಲ ಕಾರಣ. ಟೈಫಾಯ್ಡ್, ಮಲೇರಿಯಾ, ಡೆಂಗ್ಯೂ, ಕ್ಷಯ (ಟಿ.ಬಿ.) ರೋಗ, ಅಧಿಕ ರಕ್ತದೊತ್ತಡ (ಬಿ.ಪಿ.), ಮಧು ಮೇಹ (ಡಯಾಬಿಟಿಸ್), ಥೈರಾಯಿಡ್, ಹೃದ್ರೋಗ, ನರರೋಗ, ಆಸ್ತಮಾ, ಮುಂತಾದ ಸಾಂಕ್ರಾಮಿಕ ಮತ್ತು ಅಸಾಂಕ್ರಾಮಿಕ ರೋಗಗಳು ಜನರಿಗೆ ಪರಿಚಿತ. ಜನಸಂಖ್ಯೆಯ ಸುಮಾರು ಶೇಕಡಾ 2.5 ರಷ್ಟು ಜನರು ತೀವ್ರ ಸ್ವರೂಪದ ರುಮಟಾಲಜಿಕಲ್ ಕಾಯಿಲೆಗಳಿಂದ ಬಳಲುತ್ತಿರಬಹುದೆಂದು ಅಂದಾಜಿಸಲಾಗಿದೆ. ಆದರೆ ಸಂಧಿವಾತದ ವಿಷಯ ಬಂದರೆ " ಇದ್ಯಾವ ಕಾಯಿಲೆ? ನಾವಿದರ ಬಗ್ಗೆ ಕೇಳಿಯೇ ಇಲ್ಲಾ" ಎಂಬ ಉದ್ಗಾರ ಸರ್ವೇಸಾಮಾನ್ಯ.

KARNATAKA RHEUMATOLOGY ASSOCIATION

# ಭಾರತೀಯ ರುಮಟಾಲಜಿ ತಜ್ಞ ವೈದ್ಯರ ಸಂಘ
## ಕರ್ನಾಟಕ ರಾಜ್ಯ ಶಾಖೆ
# Indian Rheumatology Association
## Karnataka Chapter

# 65(414), 20th Main, 1st Block, West of Chord Road, Rajajinagar, Bengaluru - 560 010. Ph : 08042516699, +91 9886504455



Patrons
**Dr KM Mahendranath**
**Dr BG Dharmanand**

President
**Dr Vineeta Shobha**

Vice - President
**Dr Ramesh Jois**

Secretary
**Dr Nagaraj S**
**98865 04455**

Treasurer
**Dr Shiva Prasad BN**

Joint Secretary
**Dr Pramod Chebbi**

Executive Committee
**Dr Subramanian R**
**Dr Uma Karjigi**
**Dr Vijay KR Rao**
**Dr Chethana D**
**Dr Utkarsha Patil**
**Dr Ashwini Kamath**

Website
**Dr Harshini AS**

Advisors
**Dr Chandrashekara S**
**Dr Sharath Kumar**
**Dr Vikramraj Jain**




ಸಂಧಿವಾತದ ಕಾಯಿಲೆಗಳು ಮತ್ತು ಅವುಗಳ ಗುಣಲಕ್ಷಣಗಳು, ಕಾಯಿಲೆಯಿಂದ ಉಂಟಾಗುವ ಅನಾಹುತಗಳು (ಅಂಗ ವಿಕಲತೆ, ಜೀವ ಹಾನಿ ಇತ್ಯಾದಿ), ಚಿಕಿತ್ಸೆಯಲ್ಲಿ ಉಪಯೋಗಿಸುವ ಮಾತ್ರೆಗಳು - ಇವೆಲ್ಲಾ ವಿಷಯಗಳ ಬಗ್ಗೆ ಸರಿಯಾದ ವೈಜ್ಞಾನಿಕ ಮಾಹಿತಿ ಎಲ್ಲಾ ಮಾಧ್ಯಮಗಳಲ್ಲಿ ಹೆಚ್ಚು ಹೆಚ್ಚು ಕಾಣಿಸಿಕೊಳ್ಳಬೇಕು - ಆಗಲೇ ಇವುಗಳ ಬಗ್ಗೆ ಸಾಮಾಜಿಕ ಅರಿವು ಮೂಡಲು ಸಾಧ್ಯ. ಉದಾಹರಣೆಗೆ, ಕೋವಿಡ್ ನಿಯಂತ್ರಣದಲ್ಲಿ ಮಾಧ್ಯಮಗಳು ಉಂಟು ಮಾಡಿದ ಜಾಗೃತಿಯ ಪರಿಣಾಮ ನಮ್ಮ ಕಣ್ಣ ಮುಂದೆಯೇ ಇದೆ. ರುಮ್ಯಾಟಿಕ್ ಕಾಯಿಲೆಗಳನ್ನು ವಿರಳ ಕಾಯಿಲೆಗಳೆಂದು ನಿರ್ಲಕ್ಷಿಸುವಂತಿಲ್ಲ. ಪ್ರತಿಯೊಂದು ಜೀವವೂ ಅಮೂಲ್ಯ. ಅಂಗವಿಕಲತೆಯಿಂದ ಮುಕ್ತಿ ಹೊಂದಿ, ಯಾವುದೇ ಊನ ಇಲ್ಲದೆ ಒಬ್ಬ ವ್ಯಕ್ತಿ ಕಾರ್ಯ ನಿರ್ವಹಿಸುವುದಕ್ಕೆ ಬೆಲೆ ಕಟ್ಟಲಾಗದು. ಹಾಗಾಗಿ ತಡೆಗಟ್ಟಬಹುದಾದ ಅಂಗವಿಕಲತೆಯನ್ನಾಗಿ ಸಂಧಿವಾತ ಸಮಸ್ಯೆಗಳನ್ನು ಪುನರ್ ಅವಲೋಕಿಸುವ ಅಗತ್ಯವಿದೆ.

***ಹುಬ್ಬಳ್ಳಿಯಲ್ಲಿ ರುಮಟಾಲಜಿ ರಾಜ್ಯ ಮಟ್ಟದ ಸಮ್ಮೇಳನ (16/10/22)***

ಈ ನಿಟ್ಟಿನಲ್ಲಿ ಕರ್ನಾಟಕ ರುಮಟಾಲಜಿ ತಜ್ಞ ವೈದ್ಯರ ಸಂಘವು ಅತ್ಯಂತ ಸಕ್ರಿಯವಾಗಿದೆ. ಸಂಘದ ಅಧ್ಯಕ್ಷೆ, ಡಾ. ವಿನೀತಾ ಶೋಭಾ, ಕಾರ್ಯದರ್ಶಿ ಡಾ. ನಾಗರಾಜ, ಖಜಾಂಚಿ ಡಾ. ಶಿವ ಪ್ರಸಾದ್ ಮತ್ತು ಎಲ್ಲ ಪದಾಧಿಕಾರಿಗಳು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ.

ಹುಬ್ಬಳ್ಳಿಯಲ್ಲಿ ರಾಜ್ಯ ಮಟ್ಟದ ರುಮಟಾಲಜಿ ವೈದ್ಯಕೀಯ ಕಾರ್ಯಾಗಾರ ಮತ್ತು ಸಮ್ಮೇಳನ ಹಮ್ಮಿಕೊಂಡಿದ್ದು, 150 ಕ್ಕೂ ಹೆಚ್ಚು ಪ್ರತಿನಿಧಿಗಳು ನೋಂದಾಯಿಸಿಕೊಂಡಿದ್ದಾರೆ. ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳ ಆಸಕ್ತಿ ಹೆಚ್ಚಿಸಲು ರುಮಟಾಲಜಿ ರಸಪ್ರಶ್ನೆ (ಕ್ವಿಜ್) ಏರ್ಪಡಿಸಲಾಗಿದೆ. ಸ್ಥಳೀಯ ರುಮಟಾಲಜಿ ತಜ್ಞರಾದ **ಡಾ. ಪ್ರಮೋದ ಛೆಬ್ಬಿ** (ಸಮ್ಮೇಳನದ ಆಯೋಜಕರು), **ಡಾ. ಆನಂದ ಪಟ್ಟೇದ** (ಸಮ್ಮೇಳನದ ಸಹ-ಆಯೋಜಕರು), **ಡಾ. ವಿಕ್ರಮ ಹರಿದಾಸ್** (ಸಮ್ಮೇಳನಾಧ್ಯಕ್ಷರು) ಅವರು ಈ ರುಮಟಾಲಜಿ ಸಮ್ಮೇಳನಕ್ಕೆ ಅವಿರತವಾಗಿ ಶ್ರಮಿಸಿದ್ದಾರೆ. **ಡಾ. ನಾಗರಾಜ** (ಕಾರ್ಯದರ್ಶಿ ಕೆ.ಆರ್.ಎ.) ಅವರು ಕಾರ್ಯಕ್ರಮ ಸಂಯೋಜಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಅವಳಿ ನಗರಗಳ ಹಿರಿಯ ವೈದ್ಯರು, ವೈದ್ಯಕೀಯ ಕಾಲೇಜುಗಳ ಪ್ರಾಂಶುಪಾಲರು ಮತ್ತು ವಿಭಾಗ ಮುಖ್ಯಸ್ಥರು ನಮಗೆ ಬೆಂಬಲ ನೀಡಿ ಪ್ರೋತ್ಸಾಹಿಸಿದ್ದಾರೆ. ಮಾಧ್ಯಮಗಳು ಎಂದಿನಂತೆ ನಮಗೆ ಸಂಪೂರ್ಣ ಸಹಕಾರ ನೀಡಿ ರುಮಟಾಲಜಿ ಸಮಸ್ಯೆಗಳ ಬಗ್ಗೆ ಸಾರ್ವಜನಿಕ ಅರಿವು ಹೆಚ್ಚಿಸಲು ನೆರವಾಗಿವೆ.


**ಡಾ. ನಾಗರಾಜ್. ಎಸ್**
ಕಾರ್ಯದರ್ಶಿ
ಕರ್ನಾಟಕ ರಾಜ್ಯ ರುಮಟಾಲಜಿ
ತಜ್ಞ ವೈದ್ಯರ ಸಂಘ (ಕೆ.ಆರ್.ಎ.)
ಫೋನ್ : 9886504455
ಇಮೇಲ್: *irakarnataka@gmail.com*

**ಡಾ. ಆನಂದ ಪಟ್ಟೇದ**
ಸಮ್ಮೇಳನದ ಸಹ-ಆಯೋಜಕರು
ಫೋನ್ : 9483660501